ತಪ್ಪು ತಿಳುವಳಿಕೆಯಾಗಿದೆ. ಅದನ್ನು ಇಲ್ಲಿಗೆ ಮುಗಿಸಿ ತಾವು ದಯಮಾಡಿ ಕುಳಿತುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ii) ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಹೇಳಿಕೆ

+**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):**– ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ಮನವಿ ಇದೆ. ಕಾವೇರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕು. ಮೂರು ದಿವಸಗಳಿಂದ ಸದನದ ಹೊರಗಡೆ ನಾವು ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಹೇಳುತ್ತಿದ್ದೀರಿ. ಈ ಮಧ್ಯೆ ತಮಿಳುನಾಡಿನ ನಿಯೋಗವೊಂದು ನಮ್ಮಲ್ಲಿಗೆ ಬಂದಿತ್ತು...

ಅಧ್ಯಕ್ಷರು:– ಆ ಬಗ್ಗೆ ಅನಂತರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಾವು ತಮ್ಮ ಹೇಳಿಕೆಯೊಂದನ್ನು ಸಹಾ ನೋಡಿದೆವು. ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಸದನಕ್ಕೆ ಈ ವಿಚಾರದ ಬಗ್ಗೆ ಸ್ವಲ್ಪ ತಿಳಿಸಲಿ. ಈಗ ಸದನ ಸೇರಿದೆ. ಕಾವೇರಿ ಬಗ್ಗೆ ...

ಅಧ್ಯಕ್ಷರು:– ನಾನು ಅದಕ್ಕೆ ನಂತರ ಅವಕಾಶ ಮಾಡಿಕೊಡುತ್ತೇನೆ. ವಿಷಯಗಳನ್ನು ಅಜೆಂಡಾ ಪ್ರಕಾರ ಒಂದೊಂದಾಗಿ ತೆಗೆದುಕೊಳ್ಳೋಣ. ನಾನು ನಂತರ ತಮಗೆ ಆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ. ಈಗ ಸಭೆಯ ಮುಂದಿಡಲಾಗುವ...

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಸದನ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಸದನದ ಹೊರಗಡೆ ಪಾಲಿಸಿ ಮ್ಯಾಟರ್ ಬಗ್ಗೆ ಹೇಳಿಕೆ ಕೊಡುತ್ತಾ ಬಂದರೆ ಇಲ್ಲಿ ನಮ್ಮ ಗತಿಯೇನು ಸಾರ್? ಇಲ್ಲಿ ಶಾಸನ ಸಭೆ ನಡೆಯುತ್ತಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ನಾವು ನೀರು ಬಿಡುವುದಿಲ್ಲವೆಂದು ಹೊರಗಡೆ ಹೇಳುತ್ತಿದ್ದಾರೆ. ಸದನದ ಹೊರಗಡೆ ಹೇಳುವ ಮುನ್ನ ಈ ಸದನಕ್ಕೆ ಮೊದಲು ಹೇಳಬೇಕಾದುದು ಅವರ ಕರ್ತವ್ಯವಲ್ಲವೇ ಸಾರ್?

ಶ್ರೀ ವಾಟಾಳ್ ನಾಗರಾಜ್:– ಇದರ ಜೊತೆಗೆ ತಮಿಳುನಾಡಿನಿಂದ ನಿಯೋಗವೊಂದು ಸಹ ಬಂದಿದೆ. ಆ ನಿಯೋಗದವರು ಇವರಿಗೆ ಏನು ಕೇಳಿದ್ದಾರೆ? ಅದಕ್ಕೆ ಇವರು ಏನು ಹೇಳಿದ್ದಾರೆ? ಇದು ಬಹಳ ಪ್ರಾಮುಖ್ಯವಾದಂತಹ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಸದನಕ್ಕೆ ಆ ಬಗ್ಗೆ ತಿಳಿಸಬೇಕು.

ಅಧ್ಯಕ್ಷರು:– ನಾನು ಮಾನ್ಯ ಸದಸ್ಯರಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈಗ ಈ ಅಜೆಂಡಾ ಪ್ರಕಾರ ಕೆಲವು ವಿಷಯಗಳಿವೆ. ಅದಾದ ಮೇಲೆ ತಾವು ಯಾವುದೇ ವಿಚಾರ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಈಗ ತಾವು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಮಾಧುಸ್ವಾಮಿಯವರು ಕಾವೇರಿ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ನಾವೇನೂ ಅಧಿಕೃತವಾಗಿ ಹೇಳಿಲ್ಲ. ಎಲ್ಲೆಲ್ಲಿ ನಮಗೆ....

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ಮಾತಿಗೆ ನಾವು ವಿರೋಧವಾಗಿದ್ದೇವೆ ಎಂಬ ಮಾತನ್ನು ನಾವು ಹೇಳಲೇ ಇಲ್ಲ.

ಶ್ರೀ ಎನ್. ಧರ್ಮಸಿಂಗ್:– ಸಮಗ್ರವಾಗಿ ಚರ್ಚೆ ಮಾಡತಕ್ಕಂಥ ದೃಷ್ಟಿಯಿಂದ ಆ ಬಗ್ಗೆ ನಾವು ಇವತ್ತು ಸಂಜೆ 5.30 ಗಂಟೆಗೆ ಸಭೆಯೊಂದನ್ನು ಕರೆದಿದ್ದೇವೆ. ಆ ಸಭೆಗೆ ತಮಗೆ ಆಹ್ವಾನ ಕೊಟ್ಟಿದ್ದೇವೆ. ತಾವೂ ಕೂಡ ಆ ಸಭೆಗೆ ಬರಬೇಕು. ಅಲ್ಲಿ ಕೂಲಂಕುಷವಾಗಿ ವಿಚಾರ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಮುಖ್ಯಮಂತ್ರಿಗಳಾದ ತಾವು ಮಾತನಾಡುವುದೆಲ್ಲವೂ ಕೂಡ ಅಧಿಕೃತ ಎಂದು ನಾವು ಭಾವಿಸುತ್ತೇವೆ, ಅದು ತಪ್ಪೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಇವತ್ತು ಸಂಜೆ 5.30 ಗಂಟೆಗೆ ಸಭೆಯೊಂದನ್ನು ಕರೆದಿರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ನಮಗ್ಯಾರಿಗೂ ಇದುವರೆಗೂ ಅದಕ್ಕೆ ಆಹ್ವಾನವೇ ಬಂದಿಲ್ಲ.

ಶ್ರೀ ಎನ್. ಧರ್ಮಸಿಂಗ್:– ಅದು ಇಷ್ಟರಲ್ಲೇ ನಿಮಗೆ ಬರುತ್ತದೆ. ಈ ಬಗ್ಗೆ ನಿನ್ನೆ ಕೂಡ ನಾವು ಹೇಳಿದ್ದೇವೆ. ಇವತ್ತು ನಿಮಗೆಲ್ಲಾ ಆಹ್ವಾನ ಬಂದು ತಲುಪುತ್ತದೆ. ತಾವು ದಯವಿಟ್ಟು 5.30 ಗಂಟೆಗೆ ಎಲ್ಲರೂ ಬನ್ನಿರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅಧಿಕೃತವಾಗಿ ನಮಗೇನೂ ಆಹ್ವಾನ ಬಂದಿಲ್ಲವಲ್ಲಾ?

ಶ್ರೀ ಎನ್. ಧರ್ಮಸಿಂಗ್:– ಎಲ್ಲರ ಸಮಕ್ಷಮದಲ್ಲೇ ತಾವೆಲ್ಲರೂ ಆ ಸಭೆಗೆ ಬರಬೇಕೆಂದು ನಾನು ಹೇಳುತ್ತಿದ್ದೇನಲ್ಲಾ. ತಾವು ದಯವಿಟ್ಟು ಆ ಸಭೆಗೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್:– ಈ ಗದ್ದಲದಲ್ಲಿ ತಾವು ಮಾನ್ಯ ವಿರೋಧ ಪಕ್ಷಗಳವರನ್ನು ಕರೆಯಲು ದಯವಿಟ್ಟು ಮರೆಯಬಾರದು.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ. ಅವರು ಎದ್ದು ನಿಂತಾಗ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕಾದುದು ನಿಯಮ. ಆದ್ದರಿಂದ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿರುವಂತಹ ವಿಷಯ ಅತ್ಯಂತ ಮಹತ್ತರವಾದುದು. ಸದನದ ಕಾರ್ಯಕಲಾಪ ಪ್ರಾರಂಭವಾದ 3–4 ದಿವಸಗಳ ನಂತರ ಇವತ್ತು ಚರ್ಚೆ ಪ್ರಾರಂಭವಾಗುತ್ತಿದೆ. ಈ ಮಧ್ಯೆ ತಮಿಳುನಾಡಿನ ಒಂದು ನಿಯೋಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದೆ. ವಿರೋಧ ಪಕ್ಷದ ನಾಯಕರನ್ನು ಭೇಟಿ ಮಾಡಬೇಕೆಂದು ಅವರು ಹೇಳಿ ಕಳುಹಿಸಿದಾಗ ನಾನು ಹೋಗಲಿಲ್ಲ. ಏಕೆಂದರೆ, ಇವತ್ತು ಕರ್ನಾಟಕ ರಾಜ್ಯ ಸರ್ಕಾರದ ನಿಲುವು ಏನು ಎಂಬುದು ಸ್ಪಷ್ಟವಾಗಬೇಕು. ನಮ್ಮ ಕೆ.ಆರ್.ಎಸ್. ಡ್ಯಾಮ್‌ನಲ್ಲಿ ನೀರೇ ಇಲ್ಲದಿರುವಂತಹ ಸಂದರ್ಭದಲ್ಲಿ, ಹೇಗೋ ಮಾಡಿ ಕೇಂದ್ರದ ಮೇಲೆ ಒತ್ತಡ ತಂದು ನೀರು ಬಿಡಿಸಿಕೊಳ್ಳುವಂತಹ ಒಂದು ರೀತಿಯ ಸಂಚುಗಾರಿಕೆ ಇವತ್ತು ನಡೆದಿದೆ. ತಮಿಳುನಾಡಿನಲ್ಲಿ ಮಳೆಯಾಗುತ್ತಿದೆ. ಕರ್ನಾಟಕದಲ್ಲಿ ಆ ಒಂದು ಕಾವೇರಿ ಬೇಸಿನ್‌ನಲ್ಲಿ ಮಳೆ ಇನ್ನೂ ಆಗಿಲ್ಲ. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕರ್ತವ್ಯ ಇದ್ದು

12.10 ಪಿಎಂ

ಆ ರೀತಿಯ ನಿಯೋಗ ಬಂದಾಗ ತಕ್ಷಣ ಪ್ರತಿ ಪಕ್ಷದವರಿಗೆ ಕರೆದು ಅವರು ಏನು ಹೇಳಿದರು ತಾವು ಏನು ಹೇಳಿದ್ದೀರಿ ಎಂಬುದರ ಬಗ್ಗೆ ನಾವು ಪತ್ರಿಕೆ ಓದಿ ತಿಳಿದುಕೊಳ್ಳುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಯವರು ಸಭೆಯನ್ನು ಕರೆದಿರಬಹುದು, ಇವತ್ತು ಕರೆಯುವುದೂ ಸಹ ಮೊದಲನೆಯದಾಗಿ ಮುಖ್ಯ ಮಂತ್ರಿಯವರ ಸಚಿವಾಲಯದಿಂದ ಒಂದು ಪತ್ರವನ್ನು ಕಳುಹಿಸಿ ಇಂದಂಥವರಿಗೆ ಕರೆದಿದ್ದೇವೆ, ಇಂತಹ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಇದ್ದೇವೆಂದು ಮಾಡುವುದು ಆಗಲಿಲ್ಲ. ಬಹುಶಃ ಸರ್ಕಾರ ಹೊಸದಾಗಿ ರಚನೆ ಆದ ಸಂದರ್ಭದಲ್ಲಿ ನಿಧಾನವಾಗಿ ಆ ಪದ್ಧತಿಯಂತೆ ನಾವು ಮಾಡೋಣ. ಆದರೆ ಇವತ್ತು ತಾವು ಈ ರೀತಿ ಮಾತುಕತೆ ಆದ ತಕ್ಷಣ ಪ್ರತಿ ಪಕ್ಷದವರಿಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಕನ್ನಡ ನಾಡಿನ ಹಿತವನ್ನು ಪಕ್ಕಕ್ಕೆ ಸರಿಸಿ ನೀರು ಬಿಡುವುದಿಲ್ಲ ಎನ್ನುವ ವಿಶ್ವಾಸ ನನಗೆ ಇದೆ. ನಾವು ನಿಮ್ಮನ್ನು ಸಂಶಯ ಪಡುತ್ತಿಲ್ಲ, ಆದರೆ ವಿರೋಧ ಪಕ್ಷದವರಿಗೆ ಪ್ರತಿ ಹೆಜ್ಜೆ ಹೆಜ್ಜೆಗೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ನಿಮ್ಮ ಕರ್ತವ್ಯ. ಇನ್ನು ಮುಂದೆ ಆದರೂ ಅದಕ್ಕೆ ಚ್ಯುತಿ ಆಗದ ರೀತಿಯಲ್ಲಿ ತಾವು ಗಮನಿಸಬೇಕು. ನಮ್ಮ ಜಲಾಶಯಗಳಲ್ಲಿ ನೀರು ಇಲ್ಲದೆ ಮೂರು ವರ್ಷಗಳಿಂದ ಬರಗಾಲದಲ್ಲಿ ತತ್ತರಿಸಿ ಜಲಾಶಯಗಳಲ್ಲಿ ನೀರು ಇಲ್ಲದೆ ಮೂರು ವರ್ಷಗಳಿಂದ ಬರಗಾಲದಲ್ಲಿ ತತ್ತರಿಸಿ ಹೋಗುತ್ತಿರುವ ಸಂದರ್ಭದಲ್ಲಿ, ಮುಂದೆ ಏನೆಂದೂ ಗೊತ್ತಿಲ್ಲದೆ ಇರುವ ಸಂದರ್ಭದಲ್ಲಿ ತಮಿಳು ನಾಡಿನಲ್ಲಿ ಬಹಳ ಮಳೆಯಾಗುತ್ತಿರುವ ಈ ಸಂದರ್ಭದಲ್ಲಿ ಯಾವ ಕಾರಣಕ್ಕೂ ಒಂದು ಹನಿ ನೀರು ಬಿಟ್ಟು ನಮ್ಮ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲೆ ಇದೆ. ಅದನ್ನು ಮಾಡಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಹಿಂದಿನ ಮುಖ್ಯ ಮಂತ್ರಿಗಳು ವೀರಾವೇಶದ ಭಾಷಣ ಮಾಡಿದರು. ಒಂದು ಹನಿ ನೀರೂ ಕೂಡ ಬಿಡುವುದಿಲ್ಲ, ನನ್ನ ಮುಖ್ಯ ಮಂತ್ರಿ ಸ್ಥಾನ ಹೋದರೂ ಪರವಾಗಿಲ್ಲವೆಂದು ಹೇಳಿ, ರಾಜಕೀಯ ಭಾಷಣಗಳು ಮಾತ್ರ ಮಾಡಿದರು. ಹಾಗಾಗಿ ಈಗಿನ ಮುಖ್ಯ ಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳಿಗೆ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಹಳೆಯದು ಏಕೆ ಹೇಳುತ್ತಿದ್ದೇನೆ ಎಂದರೆ, ಹಳೆಯದು ಆದ ಅನ್ಯಾಯಕ್ಕೆ, ರಾಜ್ಯದ ಜನ ನೋವು ಅನುಭವಿಸಿದ್ದಕ್ಕೆ ಜನತೆಗೆ ದ್ರೋಹ ಮಾಡಿದ್ದಕ್ಕೆ ಹೇಳುತ್ತಿದ್ದೇನೆ. ತಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಘೋಷಣೆಗಳು ಮಾಡುವ ಅವಶ್ಯಕತೆ ಇಲ್ಲ. ನಿಜವಾಗಿಯೂ ನಾವು ರೈತರ ಹಿತದೃಷ್ಟಿ ಕಾಪಾಡುತ್ತೇವೆ, ಯಾವುದೇ ಕಾರಣಕ್ಕೂ ಕೂಡ ನೀರು ಬಿಡುವುದಿಲ್ಲವೆಂದು ಹೇಳಬೇಕು. ಒಂದು ಕಡೆ ಘೋಷಣೆ ಮಾಡುವುದು, ಮತ್ತೊಂದು ಕಡೆ ಒಂದು ರೀತಿ ದಾಸ್ಯ ಸ್ವರೂಪ. ಅವರು ಹೋಗಿ ತೀರಾ ದಾಸರಾಗಿ ಬಿಡುವುದು. ಕೇಂದ್ರ ಸರ್ಕಾರದ ಅವರ ನಾಯಕರುಗಳಿಗೆ ಸರೆಂಡರ್ ಆಗಬೇಕೆನ್ನುವ ದೃಷ್ಟಿಯಿಂದ, ಕೇಂದ್ರ ಸರ್ಕಾರವನ್ನು ಉಳಿಸಬೇಕೆನ್ನುವ ಆಸೆಯಿಂದ ನಾಟಕ ಮಾಡುವ ಪ್ರವೃತ್ತಿಯನ್ನು ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಮಾಡಕೂಡದು, ಎನ್ನುವ ಮಾತನ್ನು ಹೇಳಿ, ಈ ವಿಷಯದಲ್ಲಿ ಅವರು ಇಡೀ ರಾಜ್ಯಕ್ಕೆ ಆಶ್ವಾಸನೆ ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಾವು ಮುಖ್ಯ ಮಂತ್ರಿಗಳು ಈ ರಾಜ್ಯದ ಹಿತ ಕಾಪಾಡುತ್ತಾರೆ ಎನ್ನುವ ನಂಬಿಕೆ ಇಟ್ಟುಕೊಂಡಿದ್ದೇವೆ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ, ಅವರು ಈ ಸದನವನ್ನು ನಂಬಿಕೆಗೆ ತೆಗೆದುಕೊಳ್ಳಬೇಕು. ತಕ್ಷಣ ಇವರು ಮಾಡಬೇಕಾಗಿದ್ದು, ಸದನದಲ್ಲಿ ಬಂದು ಒಂದು ಹೇಳಿಕೆ ಕೊಡಬೇಕು. ತಮಿಳುನಾಡಿನ ನಿಯೋಗ ಬಂದಿತ್ತು, ತಮಿಳುನಾಡಿನ ನಿಯೋಗದ ಜೊತೆ ನಾವು ಮಾತನಾಡಿದ್ದೇವೆಂದು ಹೇಳಬೇಕಾಗಿತ್ತು. ಅದರ ಜೊತೆ ವಿರೋಧ ಪಕ್ಷಗಳನ್ನು ಕರೆದು ಏನು ಮಾಡೋಣ, ಏನು ವಿಚಾರ, ನೀರಿನ ವಿಚಾರದಲ್ಲಿ ನಾವೆಲ್ಲಾ ಒಂದೇ. ಇದರಲ್ಲಿ ಪಕ್ಷ ರಹಿತವಾಗಿದ್ದೇವೆ. ತಮಿಳುನಾಡಿನಲ್ಲಿ ಎಲ್ಲರೂ ಒಂದಾಗಿದ್ದಾರೆ. ಅದೇ ರೀತಿ ನಾವೂ ಕರ್ನಾಟಕ ರಾಜ್ಯದಲ್ಲಿ ಕಾವೇರಿ ನೀರು ಕರ್ನಾಟಕ ರಾಜ್ಯದ ರೈತರ ಹಿತ ಕಾಪಾಡುವುದರಲ್ಲಿ ನಾವೆಲ್ಲಾ ಒಗ್ಗಟ್ಟಾಗಿದ್ದೇವೆ. ಆದರೆ ನಾನು ತಮ್ಮಲ್ಲಿ ಹೇಳುವುದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯ ಮನವಿ. ಮೊದಲನೆಯದು ಎಲ್ಲಾ ಕೆಲಸಗಳಿಗಿಂತ ಹೆಚ್ಚಾಗಿ ಒಂದು ಅತೀ ಶೀಘ್ರವಾಗಿ ಮಾಡಬೇಕಾದುದು, ಮುಖ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಡಿ, ತಾವು ವಿರೋಧ ಪಕ್ಷದವರ ಸಭೆ ಕರೆಯುವುದು, ಬಿಡುವುದು ಆ ನಂತರ. ಏನೇನು ಮಾಡಿದ್ದೀರಿ ಎನ್ನುವುದು ದಯಮಾಡಿ ಈ ಸದನದ ಮುಂದೆ ತಂದು ತಾವು ಹೇಳಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಮೊದಲು ವಿರೋಧ ಪಕ್ಷಗಳ ಮುಖಂಡರ ಜೊತೆ ಚರ್ಚೆ ಮಾಡಿ ಒಟ್ಟಿಗೆ ಅವರು ಸ್ಟೇಟ್‌ಮೆಂಟ್ ಮಾಡಿದರೆ ಚೆನ್ನಾಗಿರುತ್ತದೆ. ವಾಸ್ತವವಾಗಿ ನೆನ್ನೆ ಕರೆಯಬೇಕಾಗಿತ್ತು. ನಿನ್ನೆ ವಿರೋಧ ಪಕ್ಷಗಳ ಸಭೆ ಕರೆದು, ಇವತ್ತು ಸಭೆ ಪ್ರಾರಂಭವಾದ ತಕ್ಷಣ ಅದರ ಬಗ್ಗೆ ಸದನಕ್ಕೆ ಮಾಹಿತಿಯನ್ನು ಕೊಡಬೇಕಾಗಿತ್ತು. ಅದನ್ನು ಬಿಟ್ಟು ಸದನ ನಡೆಯುವ ಸಂದರ್ಭದಲ್ಲಿ ಆ ವಿಚಾರದ ಬಗ್ಗೆ ಆದೆ ಮಾತನಾಡತಕ್ಕಂಥದ್ದು, ಸದನಕ್ಕೆ ಗೌರವ ತರುವ ವಿಚಾರ ಅಲ್ಲ ಎನ್ನುವುದಷ್ಟೇ ತಮ್ಮ ಗಮನಕ್ಕೆ ತರುವುದು ಹೊರತು ಬೇರೆ ಅನುಮಾನ ಇದರ ಬಗ್ಗೆ ಇಲ್ಲ.

ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು):– ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷಗಳ ಜೊತೆ ಎಲ್ಲಾ ಜನ ಪ್ರತಿನಿಧಿಗಳನ್ನು ವಿಶೇಷವಾಗಿ ಎಲ್ಲಾ ಶಾಸಕರಿಗೂ ಕೂಡ ಇಂದಿನ ಸಂಜೆ ಸಭೆಗೆ ಕರೆಯಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಕಾವೇರಿ ವಿಚಾರದಲ್ಲಿ ಮಾತನಾಡಿದರು. ಈ ಕಾವೇರಿ ವಿಚಾರದಲ್ಲಿ ಪತ್ರಿಕೆಯವರು ನಮ್ಮನ್ನು ಕೇಳಿದಾಗ ನಾನೂ ಹಾಗೂ ಉಪ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದೇವೆ, ಕರ್ನಾಟಕದ ಹಿತರಕ್ಷಣೆ, ಕರ್ನಾಟಕದ ರೈತರಿಗೆ ಧಕ್ಕೆ ಒದಗುವ ರೀತಿ ನಾವು ಯಾವ ರೀತಿ ಕೂಡ ರಾಜಿ ಆಗಿಲ್ಲ, ಹನಿ ನೀರೂ ಕೂಡ ಬಿಡುವ ಮಾತು ಸರ್ಕಾರದ ಬಳಿ ಇಲ್ಲ, ಇವತ್ತು 9ನೇ ತಾರೀಖು ಅಧಿವೇಶನ ಕರೆದಿದ್ದೇವೆ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಯುತ್ತಿದೆ. ತಮಿಳುನಾಡಿನ ವಿರೋಧ ಪಕ್ಷದವರು ಬಂದಿದ್ದರು. That was only a informal, cordial talks and

they have presented their case. ನಾವು ಹಿಯರ್ ಮಾಡಿದ್ದೇವೆ. ಮಾನ್ಯ ಪ್ರಧಾನ ಮಂತ್ರಿಗಳೂ ಕೂಡ ಹೆಚ್ಚು ನೀರು ಬಂದಿದೆ ಎನ್ನುವ ಮಾತನ್ನು ಕೂಡ ದೂರವಾಣಿ ಮುಖಾಂತರ ನನಗೆ ಮಾತನಾಡಿದರು, ಇರತಕ್ಕಂತಹ ವಾಸ್ತವಾಂಶ ಕೂಡ ನಾವು ಪ್ರಧಾನ ಮಂತ್ರಿಯವರಿಗೆ ಫ್ಯಾಕ್ಸ್ ಮಾಡಿ ಕಳುಹಿಸಿದ್ದೇವೆ. ಕರ್ನಾಟಕದ ಎಲ್ಲಾ ಲೋಕ ಸಭಾ ಸದಸ್ಯರು ಮತ್ತು ಶ್ರೀಯುತರಾದ ಆಸ್ಕರ್ ಫರ್ನಾಂಡಿಸ್‌ರವರು, ಕೆ.ಹೆಚ್. ಮುನಿಯಪ್ಪ, ಎಮ್.ವಿ. ರಾಜಶೇಖರ್‌ರವರು ಮತ್ತು ರೆಹಮಾನ್ ಖಾನ್‌ರವರೂ ಎಲ್ಲರೂ ಸೇರಿ ಪ್ರಧಾನ ಮಂತ್ರಿಯವರು ಬಳಿ ಹೋಗಿ ಸಿಆರ್‌ಎ ಮೀಟಿಂಗ್ ಕರೆಯುವುದಾಗಲಿ, ಮತ್ತೆ ಬೇರೆ ವಿಚಾರದ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಆಗತಕ್ಕಂತಹ ಆಗುಹೋಗುಗಳ ಬಗ್ಗೆ ಕೇಂದ್ರದಲ್ಲಿ ಇರತಕ್ಕಂಥ ಮಂತ್ರಿಗಳು ಲೋಕ ಸಭಾ ಸದಸ್ಯರೂ ಕೂಡ ಆಲರ್ಟ್ ಆಗಿದ್ದಾರೆ. ನಾವೂ ಕೂಡ ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟಿದ್ದೇವೆ. ಶ್ರೀರಾಮರೆಡ್ಡಿಯವರು ಹೇಳಿದರು, ಇವತ್ತು ಏಕೆ ನೆನ್ನೆಯೇ ಸಭೆ ಕರೆಯಬೇಕಾಗಿತ್ತು ಎಂದು ಹೇಳಿದರು, ನೆನ್ನೆ ರವಿವಾರ ಯಾರೂ ಇರುವುದಿಲ್ಲವೆಂದು ಇವತ್ತು ಇದು ಘಂಟೆ ಮೂವತ್ತು ನಿಮಿಷಕ್ಕೆ ಅಥವಾ ಆರು ಗಂಟೆಗೆ ಸಭೆ ಕರೆದಿದ್ದೇವೆ. ಅದರಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಕಾವೇರಿ ನೀರಿನ ಸಮಸ್ಯೆ ಬಗ್ಗೆ ಹೋರಾಟ ಮಾಡತಕ್ಕಂತಹ ಬೇರೆ ವ್ಯಕ್ತಿಗಳನ್ನೂ ಕೂಡ ಕರೆಸಿದ್ದೇವೆ. ನಿನ್ನೆ ಜಯಲಲಿತಾರವರು ಒಂದು ಪತ್ರ ಬರೆದಿದ್ದಾರೆ, ಅದು ಡಿಎಮ್‌ಕೆ ಡೆಲಿಗೇಷನ್ ಆಯಿತು. ಅಫೀಷಿಯಲ್ ಡೆಲಿಗೇಷನ್ ಕೂಡ ಈ ತಿಂಗಳು 15 ಅಥವಾ 16ನೇ ತಾರೀಖಿಗೆ ಬರುತ್ತಾರೆಂದು ಈಗಾಗಲೇ ಪತ್ರ ತಲುಪಿದೆ. ಅದರ ಬಗ್ಗೆ ನಾವು ಎಲ್ಲಿಯೂ ಕಮಿಟ್‌ಮೆಂಟ್ ಮಾಡಿಕೊಂಡಿಲ್ಲ. ನಾವು ಬಹಳ ಆವಸರದಲ್ಲಿ ಇದ್ದೆವೋ ಅವರು ಬಂದರು ಭೇಟಿಯಾಗಿದ್ದೇವೆ. ಕೇಂದ್ರದಿಂದ ಯಾವ ಒತ್ತಡಕ್ಕೆ ಮಣಿದು ನೀರು ಕೊಡತಕ್ಕಂತಹ ಪ್ರಮೇಯ ಇಲ್ಲ. ನಾವೂ ನೀವೂ ಕೂಡಿ ಇದು ನೀರಿನ ಸಮಸ್ಯೆ, ಇಡೀ ರಾಜ್ಯದ ಜನರ ಹಿತರಕ್ಷಣೆ, ನಮ್ಮ ಸಮಸ್ಯೆ ಆಗಿದೆ. ಒಂದು ನೂರು ವರ್ಷಗಳಿಂದ ನಡೆದು ಬಂದಂತಹ ಸಮಸ್ಯೆ. ನಾವು ನೀವು ಕೂಡಿ ಸಮಗ್ರವಾಗಿ ವಿಚಾರ ಮಾಡೋಣ. ನಮ್ಮ ನಿಲುವು ಏನು ಇದರ ಬಗ್ಗೆ ಎಂದು ಸಂಜೆಗೆ ತೀರ್ಮಾನಕ್ಕೆ ಬರೋಣ.

ಶ್ರೀ ವಾಟಾಳ್ ನಾಗರಾಜ್:– ಪ್ರತಿ ಸಾರಿ ತಮಿಳುನಾಡಿನ ರಾಜಕೀಯ. ಕರುಣಾನಿಧಿಯವರದ್ದು, ಜಯಲಲಿತಾರವರದ್ದು ಇದೇ ಆಗಿದೆ. ಇದೇ ರಾಜಕೀಯ ಮಾಡುತ್ತಿದ್ದಾರೆ. ನಾವು ಎಚ್ಚರಿಕೆಯಿಂದ ಇರಬೇಕು. ಪ್ರಧಾನ ಮಂತ್ರಿಗಳು ನೀರು ಬಿಡಬೇಕೆಂದು ಒಂದು ಕಡೆ ಹೇಳಿದ್ದಾರೆ. ಇವೆಲ್ಲಾ ಗಮನದಲ್ಲಿಟ್ಟುಕೊಂಡು ತಾವು ಇದರ ಬಗ್ಗೆ ತಮ್ಮ ಹೇಳಿಕೆಗಳನ್ನು ಕೊಟ್ಟಿದ್ದೀರಿ. ಇದನ್ನು ನಾನು ನೋಡಿ ಸಂತೋಷವಾಯಿತು. ಇದು ನಮ್ಮ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಮುಖ್ಯ ಮಂತ್ರಿಗಳು ಧೈರ್ಯವಾಗಿ ನಿಲ್ಲಬೇಕೆಂದು ನಮ್ಮ ಆಶಯ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಸಭಾಧ್ಯಕ್ಷರೆ, ಸಭೆಯ ನಿಯಮಾವಳಿ ಪ್ರಕಾರ ಪ್ರಾರಂಭದಲ್ಲಿ ನಿಯಮ 60ರ ಪ್ರಕಾರ ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು:– ಎರಡು–ಮೂರು ವಿಷಯಗಳಿವೆ, ಆದಾದ ಮೇಲೆ ತೆಗೆದುಕೊಳ್ಳೋಣ.